ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/68/2015-16. ದಿನಾಂಕ:27-09-2016.

<table>
<tr><th>ವಾದಿಗಳು</th><th>ಪ್ರತಿವಾದಿಗಳು</th></tr>
<tr><td>1)ಉತ್ತಂಗಿ ಕೊಟ್ರಪ್ಪ ತಂದೆ ಲೇಟ್ ಉತ್ತಂಗಿ ತಿರುಕಪ್ಪ<br>2)ಉತ್ತಂಗಿ ಕಾಡಪ್ಪ ತಂದೆ ಲೇಟ್ ಉತ್ತಂಗಿ ತಿರುಕಪ್ಪ<br>ರಾಂಪುರ ಗ್ರಾಮ ಕೂಡ್ಲಿಗಿ ತಾಲೂಕು</td><td>ರುದ್ರಪ್ಪ ತಂದೆ ಲೇಟ್ ಕೊಟ್ರಪ್ಪ<br>ರಾಂಪುರ ಗ್ರಾಮ ಕೂಡ್ಲಿಗಿ ತಾಲೂಕು</td></tr>
<tr><td colspan="2">ಕೂಡ್ಲಿಗಿ ತಾಲೂಕು ರಾಂಪುರ ಗ್ರಾಮದ ಸನಂ 269/1. 270ಎ/2. 271ಎಫ್/2. 368ಬಿ. 369ಬಿ/1. ವಿಸ್ತೀರ್ಣ 2-32. 2-60. 1-03. 0-24. 1-66. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ.</td></tr>
</table>

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ರಾಂಪುರ ಗ್ರಾಮದ ಸನಂ 269/1. 270ಎ/2. 271ಎಫ್/2. 368ಬಿ. 369ಬಿ/1. ವಿಸ್ತೀರ್ಣ 2-32. 2-60. 1-03. 0-24. 1-66. ಎಕ್ರೆ ಜಮೀನುಗಳನ್ನು ಸದರಿ ಗ್ರಾಮದ ಉತ್ತಂಗಿ ಕೊಟ್ರಪ್ಪ ತಂದೆ ಲೇಟ್ ಉತ್ತಂಗಿ ತಿರುಕಪ್ಪ. ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ರಾಂಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 25-02-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ರುದ್ರಪ್ಪ ತಂದೆ ಲೇಟ್ ಕೊಟ್ರಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 34/2014-15. ದಿನಾಂಕ 25-03-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 03-11-2015. ರಿಂದ 27-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ರಾಂಪುರ ಗ್ರಾಮದ ಸನಂ 269/1. 270ಎ/2. 271ಎಫ್/2. 368ಬಿ. 369ಬಿ/1. ವಿಸ್ತೀರ್ಣ 2-32. 2-60. 1-03. 0-24. 1-66. ಎಕ್ರೆ ಜಮೀನುಗಳು ನಮ್ಮ ತಾಯಿಯವರಾದ ಉತ್ತಂಗಿ ನಿಂಗಮ್ಮ ಗಂಡ ಲೇಟ್ ತಿರುಕಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಸದರಿ ನಮ್ಮ ತಾಯಿಯವರು ದಿನಾಂಕ 08-07-1968 ರಂದು ಹಾಗೂ ನಮ್ಮ ತಂದೆಯವರಾದ ಉತ್ತಂಗಿ ತಿರುಕಪ್ಪ ತಂದೆ ಉತ್ತಂಗಿ ಕಾಡಪ್ಪ ಇವರು ದಿನಾಂಕ 25-10-2005 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ನಮ್ಮ ಹಿಸ್ಯಾಕ್ಕೆ ಪಾಲು ವಿಭಾಗದ ಪತ್ರದನ್ವಯ ಬರಬೇಕಾಗಿದ್ದು ಸದರಿ ವಿವಾದಿತ ಸ್ವತ್ತುಗಳು ಖಾತೆದಾರರ ಪಿತ್ರಾರ್ಜಿತ ಆಸ್ತೀಯಾಗಿದ್ದು ಸದರಿ ಪಿತ್ರಾರ್ಜಿತ ಆಸ್ತೀಯಲ್ಲಿ ಖಾತೆದಾರಳಿಗೆ ಮತ್ತು ಅವರ ಸಹೋದರರಾದ ಮಲ್ಲಿಕಾರ್ಜುನ ಇತರರಿಗೆ ಪಾಲು ಬಂದಿದ್ದು ತಮಗೆ ಪಾಲು ಬರುವುದಕ್ಕಾಗಿ ತಕರಾರು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

ಪು.ತಿ.ನೋ-2

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ವಿವಾದಿತ ಸ್ವತ್ತುಗಳನ್ನು ಪೋತಿವಿರಾಸತ್ ಪ್ರಕಾರ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ರಾಂಪುರ ಗ್ರಾಮದ ಸನಂ 269/1. 270ಎ/2. 271ಎಫ್/2. 368ಬಿ. 369ಬಿ/1. ವಿಸ್ತೀರ್ಣ 2-32. 2-60. 1-03. 0-24. 1-66. ಎಕ್ರೆ ಜಮೀನುಗಳು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ಉತ್ತಂಗಿ ಕೊಟ್ರಪ್ಪ ತಂದೆ ಲೇಟ್ ಉತ್ತಂಗಿ ತಿರುಕಪ್ಪ. ಉತ್ತಂಗಿ ಕಾಡಪ್ಪ ತಂದೆ ಲೇಟ್ ಉತ್ತಂಗಿ ತಿರುಕಪ್ಪ ರಾಂಪುರ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ತಕರಾರುದಾರರು ತಮ್ಮ ಹಕ್ಕನ್ನು ಪಡೆಯುವುದಕ್ಕಾಗಿ ಸಿವಿಲ್ ನ್ಯಾಯಾಲಯದ ಮೋರೆ ಹೋಗುವುದು ಸೂಕ್ತವೆಂದು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 27-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ ಕೊಟ್ಟೂರು
**ಕೊಟ್ಟೂರು**

ಇದರ ಪ್ರತಿಯನ್ನು:

1) ಅರ್ಜಿದಾರರಾದ ಉತ್ತಂಗಿ ಕೊಟ್ರಪ್ಪ ತಂದೆ ಲೇಟ್ ಉತ್ತಂಗಿ ತಿರುಕಪ್ಪ, ಉತ್ತಂಗಿ ಕಾಡಪ್ಪ ತಂದೆ ಲೇಟ್ ಉತ್ತಂಗಿ ತಿರುಕಪ್ಪ, ರಾಂಪುದ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ರುದ್ರಪ್ಪ ತಂದೆ ಲೇಟ್ ಕೊಟ್ರಪ್ಪ ರಾಂಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.